ಸೃಜನಿ

SRUJANI: Indian Journal of Innovative Research and Development (SIJIRD)
Volume-5 Issue 1, March-April 2026, Pp. 1- 4
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಮೈಸೂರಿನ ಆರಂಭದ ಪ್ರಮುಖ ಒಡೆಯರುಗಳ ಸಾಧನೆಗಳು ಮತ್ತು ಕೊಡುಗೆಗಳು

**ಸವಿತಾ ಕೆ.ಎಸ್**

ಸಹ ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಇತಿಹಾಸ ವಿಭಾಗ, ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು, ಮೈಸೂರು.

***Abstract:***

*ಒಡೆಯರ್ ವಂಶ 1399 ರಿಂದ 1947 ರವರೆಗೆ ಮೈಸೂರು ಸಂಸ್ಥಾನವನ್ನು ಆಳಿದ ರಾಜವಂಶ. 1947 ರಲ್ಲಿ ಭಾರತದ ಸ್ವಾತಂತ್ರ್ಯಾನಂತರ ಭಾರತ ಗಣ ರಾಜ್ಯಕ್ಕೆ ಮೈಸೂರು ಸಂಸ್ಥಾನ ಸೇರಿದ ನಂತರ ಒಡೆಯರ್ ವಂಶದ ಆಡಳಿತ ಕೊನೆಗೊಂಡಿತು. 'ಒಡೆಯರ್' ಎನ್ನವು ಪದದ ಮೂಲ 'ಒಡೆಯ'. ಒಡೆಯರ್ ಅಥವಾ ದೊರೆಗಳು "ಯದುವಂಶಕ್ಕೆ" ಸೇರಿದವರು. ಮೈಸೂರು ಸಂಸ್ಥಾನದ ಯದುವಂಶ ವಿಶಿಷ್ಟವಾದ ರಾಜಮನೆತನ . ಭಾರತಕ್ಕೆ ಸ್ವಾತಂತ್ರ್ಯ ಬಂದ ನಂತರವೂ ಒಡೆಯರ್ ಅಥವಾ 'ವಡೀಯಾರ್' ಸರ್ ನೇಮ್ ಬಳಕೆ ರಾಜಮನೆತನದ ಸದಸ್ಯರಲ್ಲೇ ಉಳಿಸಿಕೊಳ್ಳಲಾಗಿತ್ತು. 1399 ರಿಂದ 1947ರ ತನಕ ರಾಜ್ಯಭಾರ ಮಾಡಿದ ಯದುವಂಶ ಸ್ಥಾಪಕ ಯದುರಾಯ ಅಥವಾ ವಿಜಯ. ಸೋದರ ಕೃಷ್ಣ ಅಥವಾ ಕೃಷ್ಣರಾಯನೊಂದಿಗೆ ಯದುರಾಯ ದ್ವಾರಕೆಯಿಂದ ತೀರ್ಥಯಾತ್ರೆಗಾಗಿ ಮೈಸೂರಿಗೆ ಬಂದಿದ್ದರು. ಮೇಲುಕೋಟೆ ದೇಗುಲಕ್ಕೆ ಭೇಟಿ ಕೊಟ್ಟ ನಂತರ ದೊಡ್ಡಕೆರೆ ಸಮೀಪವಿರುವ 'ಕೋಡಿ ಬಸವಣ್ಣ' ದೇಗುಲದಲ್ಲಿ ಇಬ್ಬರು ನೆಲೆಸಿದ್ದರು. ಪ್ರಾಂತ್ಯದ ರಾಜ್ಯ ನಿಧನರಾಗಿದ್ದು ನಿಮ್ಮ ಮಗಳನ್ನು ನನಗೆ ಮದುವೆ ಮಾಡಿಕೊಡಿ ಎಂದು ಮಹಾರಾಣಿ ಅವರಿಗೆ ಬೆದರಿಕೆ ಒಡ್ಡಿದ ಪಕ್ಕದ ರಾಜ್ಯ 'ಕರುಗ' ಹಳ್ಳಿಯ ಮಾರನಾಯಕ ಪೀಡಿಸುತ್ತಿರುತ್ತಾನೆ. ಈ ಸಂದರ್ಭದಲ್ಲಿ ಯಾತ್ರಾರ್ಥಿಗಳಾಗಿದ್ದ ಯದುರಾಯ ಮತ್ತು ಕೃಷ್ಣರಾಯರಿಗೆ ವಿಷಯ ತಿಳಿಯುತ್ತದೆ. ಜಂಗಮ ಸ್ವಾಮಿಗಳೊಬ್ಬರ ನೆರವು ಪಡೆದು ಮಾರನಾಯಕನನ್ನು ಬಗ್ಗು ಬಡಿದು ಮೈಸೂರನ್ನು ಉಳಿಸಿ ಯದುವಂಶ ಸ್ಥಾಪಿಸುತ್ತಾರೆ. ಅಲ್ಲಿಂದ 25ಕ್ಕೂ ರಾಜರು ರಾಜ್ಯಭಾರ ಮಾಡಿದ್ದಾರೆ.*

***Keywords:*** *ಮೈಸೂರು ಸಂಸ್ಥಾನ, ಯದುವಂಶ, ಮೈಸೂರು ಅರಸರು, ಒಡೆಯರು*

## ಪೀಠಿಕೆ

ಒಡೆಯರ ಸಂಸತತಿಯ ಮೂಲ ಮತ್ತು ಪ್ರಾರಂಭದ ಇತಿಹಾಸವು ಅಸ್ಪಷ್ಟವಾಗಿದೆ. ಈ ಸಂಸತಿಯ ಮೂಲ ಪುರುಷರೆಂದು ಹೇಳಲಾಗಿರುವ ಯದುರಾಯ ಮತ್ತು ಕೃಷ್ಣರಾಯ ಎಂಬ ಸಹೋದರರು ದ್ವಾರಕೆಯಿಂದ ದಕ್ಷಿಣಕ್ಕೆ ಬಂದು ರಾಜ್ಯ ಸ್ಥಾಪನೆ ಮಾಡಿದರೆಂದೂ ಮತ್ತು ಇವರು ಶ್ರೀಕೃಷ್ಣನಿಂದ ಪುನೀತವಾದ ಯದುವಂಶಕ್ಕೆ ಸೇರಿದವರೆಂಬ ಐತಿಹ್ಯವು ಪ್ರಚಾರವಾಗಿದೆ. ಆದರೆ ಇದು ಪ್ರಾರಂಭದ ಶಾಸನಗಳಲ್ಲಾಗಲೀ ಮತ್ತಾವ ಆಧಾರಗಳಲ್ಲಾಗಲೀ ಕಂಡು ಬರುವುದಿಲ್ಲ.

ಯದುರಾಯನ ತರುವಾಯ ಕ್ರಿ.ಶ. 1423 ರಲ್ಲಿ ಅವನ ಮಗ ಬೆಟ್ಟದ ಚಾಮರಾಜನು ಪಾಳೆಯಗಾರನಾಗಿ 1458ರ ವರೆಗೆ ಅಧಿಕಾರ ನಡೆಸಿದನು. ಅನಂತರ ಇವನ ಮಗನಾದ ಒಂದನೇ

***Please cite this article as:*** ಸವಿತಾ ಕೆ.ಎಸ್. (2026). ಮೈಸೂರಿನ ಆರಂಭದ ಪ್ರಮುಖ ಒಡೆಯರುಗಳ ಸಾಧನೆಗಳು ಮತ್ತು ಕೊಡುಗೆಗಳು. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 5(1), 1–4

ತಿಮ್ಮರಾಜನು 1458 ರಿಂದ 1478ರ ವರೆಗೆ ಅಧಿಕಾರದಲ್ಲಿದ್ದನು. ಅನಂತರ ಹಿರಿಯ ಚಾಮರಾಜ ಅಥವಾ ಎರಡನೇ ಚಾಮರಾಜನು 1478 ರಿಂದ 1513ರ ವರೆಗೆ ಅಧಿಕಾರ ನಡೆಸಿದನು. ಇವನ ಉತ್ತರಾಧಿಕಾರಿಯಾದ 3ನೇ ಬೆಟ್ಟದ ಚಾಮರಾಜನು 1513 ರಿಂದ 1552 ರವರೆಗೆ ಹೀಗೆ ಅಧಿಕಾರ ವಂಶಪಾರಂಪರ್ಯವಾಗಿ ಮುಂದುವರೆಯಿತು.

ನಂತರ ರಾಜ ಒಡೆಯರ್ ಶ್ರೀರಂಗಪಟ್ಟಣವನ್ನು ವಶಪಡಿಸಿಕೊಂಡು ಅದನ್ನು ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡು ಸಂಗತಿಯು ಮೈಸೂರಿನ ಇತಿಹಾಸದಲ್ಲಿ ಒಂದು ಸ್ಮರಣೀಯ ಘಟನೆಯಾಗಿದೆ. ಒಡೆಯರ ಸಂತತಿಯ ಪ್ರಪ್ರಥಮ ರಾಜನೆಂದು ಗಣನೆಗೆ ಬಂದ ರಾಜ ಒಡೆಯರ್ ಅನೇಕ ಸುಧಾರಣೆಗಳನ್ನು ಜಾರಿಗೆ ತಂದರು. ಕಂದಾಯ ವಸೂಲಿ ಮತ್ತು ಕಾನೂನು ಪಾಲನೆಗಾಗಿ ಗ್ರಾಮಾಧಿಕರಿಗಳನ್ನು ಜಾರಿಗೆ ತಂದನು. ದೇವಾಲಯಗಳಿಗೆ ದತ್ತಿಗಳನ್ನು ನೀಡಲಾಯಿತು. ಆಡಳಿತ ಮತ್ತು ಸೈನಿಕ ವ್ಯವಸ್ಥೆಯ ದಕ್ಷ ನಿರ್ವಹಣೆಗಾಗಿ ದಳವಾಯಿ ಮತ್ತು ಸರ್ವಾಧಿಕಾರಿ ಎಂಬ ಹುದ್ದೆಯನ್ನು ಜಾರಿಗೆ ತಂದು ತನ್ನ ಸೋದರನ ಪುತ್ರನಾದ ಬೆಟ್ಟದ ಅರಸು ಅಂದು ಆ ಹುದ್ದೆಗೆ ನೇಮಕವಾದ. ದೈವಭಕ್ತನೂ ಆದ ರಾಜ ಒಡೆಯರ್ ಶ್ರೀರಂಗಪಟ್ಟಣ, ಮೈಸೂರು ಮತ್ತು ಮೇಲುಕೋಟೆಯ ದೇವಾಲಯಗಳಿಗೆ ದಾನಗಳನ್ನು ನೀಡಿ ಅವುಗಳ ಆಡಳಿತವು ಸುಸ್ಥಿತಿಯಲ್ಲಿ ಮುಂದುವರೆಯುವಂತೆ ವ್ಯವಸ್ಥೆ ಮಾಡಿದನು. ಇವನು 1610 ರಲ್ಲಿ ನವರಾತ್ರಿಯನ್ನು ಪ್ರಪ್ರಥಮವಾಗಿ ಆಚರಿಸಿದನು. ಅಂದಿನಿಂದ ನವರಾತ್ರಿ ಉತ್ಸವವನ್ನು ವರ್ಷಂಪ್ರತಿ ವಿಜೃಂಭಣೆಯಿಂದ ಆಚರಿಸುವುದು ರೂಢಿಗೆ ಬಂದಿತು. ಹೀಗೆ ಮೈಸೂರು ಇತಿಹಾಸದಲ್ಲಿ ಸ್ಮರಣೀಯನಾಗಿದ್ದಾನೆ. ರಾಜ ಒಡೆಯರ್ ಕ್ರಿ.ಶ. 1617 ರಲ್ಲಿ ಮರಣ ಹೊಂದಿದನು.

ಮೊಮ್ಮಗನಾದ ಚಾಮರಾಜ ಒಡೆಯರ್ ಉತ್ತರಾಧಿಕಾರಿಯಾದನು. ಇವನಿಗೆ ಐದನೇ ಚಾಮರಾಜ ಒಡೆಯರ್ ಎಂದು ಹೆಸರಾಗಿದೆ. 1617 ರಿಂದ 1637 ರವರೆಗೆ ಆಳಿದನು. ಇವನು ಅಧಿಕಾರಕ್ಕೆ ಬರುವ ವೇಳೆಗೆ ವಿಜಯನಗರದ ಅಧಿಕಾರವು ಹೀನಸ್ಥಿತಿಯಲ್ಲಿತ್ತು. ಐದನೇ ಚಾಮರಾಜ ಒಡೆಯನು ಈ ಅವಕಾಶವನ್ನು ಉಪಯೋಗಿಸಿಕೊಂಡು ಮದ್ದೂರು, ಮಳವಳ್ಳಿ ಪ್ರದೇಶಗಳನ್ನು ವಶಪಡಿಸಿಕೊಂಡನು. ಕಾವೇರಿಯ ಕಾಲುವೆಗಳನ್ನು ದುರಸ್ಥಿಗೊಳಿಸಿದನು. ಹಾಗೆಯೇ ಒಂದು ಸೇತುವೆಯನ್ನು ಸಹ ನಿರ್ಮಿಸಲಾಯಿತು. ಕ್ರಿ.ಶ. 1635 ರಲ್ಲಿ ಶ್ರೀರಂಗಪಟ್ಟಣದಲ್ಲಿ ಒಂದು ಆಯುಧಾಗಾರವನ್ನು ಸ್ಥಾಪಿಸಲಾಯಿತು. ಮಿಗಿಲಾಗಿ ಒಂದು ಗಜದಳವನ್ನು ಹೊಂದಲು ವ್ಯವಸ್ಥೆಯನ್ನು ಕೈಗೊಳ್ಳಲಾಯಿತು. ಐದನೇ ಚಾಮರಾಜನು ಮೇಲುಕೋಟೆಯಲ್ಲಿ ಒಂದು ಸ್ನಾನಘಟ್ಟವನ್ನು ನಿರ್ಮಿಸಿ ಅಲ್ಲಿ ಒಂದು ಕರೆಯನ್ನು ಕಟ್ಟಿಸಿದನು. "ಚಾಮರಾಜೋಕ್ತಿ ವಿಲಾಸ" ಕನ್ನಡ ರೂಪವಾದ ಗ್ರಂಥ ರಚಿಸಿದನು. ಕ್ರಿ.ಶ 1637 ರಲ್ಲಿ ಐದನೇ ಚಾರಮರಾಜನು ಮರಣ ಹೊಂದಿದ ತರುವಾಯ ಇವನ ಚಿಕ್ಕಪ್ಪನೂ ರಾಜ ಒಡೆಯರ ಮರಣೊತ್ತರ ಕುಮಾರನೂ ಆದ ಎರಡನೇ ರಾಜ ಒಡೆಯರ್ ಅಧಿಕಾರಕ್ಕೆ ಬಂದನು. ಆಗ ದಳವಾಯಿಯಾಗಿದ್ದ ವಿಕ್ರಮರಾಯನಿಗೂ ಎರಡನೇ ರಾಜ ಒಡೆಯರನಿಗೂ ವಿರಸವುಂಟಾಯಿತು. ವಿಕ್ರಮರಾಯನು 2ನೇ ರಾಜ ಒಡೆಯನನ್ನು ವಿಷ ಹಾಕಿಸಿ ಕೊಲ್ಲಿಸಿದನು. ಅನಂತರ ಬೆಟ್ಟದ ಚಾಮರಾಜನ 2ನೇ ಮಗನಾದ ಕಂಠೀರವ ನರಸ ರಾಜನು ಅಧಿಕಾರಕ್ಕೆ ಬಂದನು.

ಕಂಠೀರವ ನರಸರಾಜ ಒಡೆಯನು ಕ್ರಿ.ಶ 1638 ರಿಂದ 1659 ರವರೆಗೆ ಆಳಿದನು. ಶ್ರೀರಂಗಪಟ್ಟಣದ ಸುತ್ತಮುತ್ತಲಿನ ಪಾಳೆಯಗಾರರ ವಿರೋಧವನ್ನು ಎದುರಿಸಿ ದಕ್ಷನಾದ ಅವನು ತನಗೆದುರಾದ ಎಲ್ಲಾ ಸಮಸ್ಯೆಗಳನ್ನು ಯಶಸ್ವಿಯಾಗಿ ಎದುರಿಸಿ ಜಯಶಾಲಿಯಾದನು. ಶ್ರೀರಂಗಪಟ್ಟಣದಲ್ಲಿ ಒಂದು ಟಂಕ ಶಾಲೆಯನ್ನು ಸ್ಥಾಪಿಸಿ ತನ್ನ ಹೆಸರಿನಲ್ಲಿ ಸ್ವತಂತ್ರವಾಗಿ ನಾಣ್ಯಗಳನ್ನು ಅಚ್ಚು ಹಾಕಿಸಿದನು.

ಶ್ರೀರಂಗಪಟ್ಟಣದ ಕೋಟೆಯಲ್ಲಿ ನರಸಿಂಹಸ್ವಾಮಿ ದೇವಾಲಯವನ್ನು ಕಟ್ಟಿಸಿದನು. ಇವರ ಆಳ್ವಿಕೆಯಲ್ಲಿ ತಿಮ್ಮರಸ ಮಾರ್ಕಂಡೇಯ ಪುರಾಣ, ರಾಮಾಯಣ, ಬಾಸ್ಕರನ ಬೇಹಾರಗಣಿತ ಮತ್ತು ಗೋವಿಂದವೈದ್ಯನ ಕಂಠೀರವನರಸ ರಾಜ ವಿಜಯಂ ಗ್ರಂಥಗಳು ರಚನೆಯಾದವು. ರಾಜ್ಯವನ್ನು ವಿಸ್ತರಿಸಿ, ಮನೆತನದ ಗೌರವವನ್ನು ಹೆಚ್ಚಿಸಿ 45ನೇ ವಯಸ್ಸಿನಲ್ಲಿ ಮರಣ ಹೊಂದಿದನು.

ಕಂಠೀರವ ನರಸರಾಜನ ತರುವಾಯ ದೇವರಾಜನು ಅಧಿಕಾರಕ್ಕೆ ಬಂದನು. 1659 ರಿಂದ 1673ರವರೆಗೆ ಆಳಿದನು. ಈತ ರಾಜ್ಯವನ್ನು ವಿಸ್ತರಿಸಿ ಅನೇಕ ಅಭಿವೃದ್ಧಿಯ ಕಾರ್ಯಗಳನ್ನು ಕೈಗೊಂಡನು. ಅನೇಕ ಕೆರೆಕೊಳಗಳನ್ನು ಕಟ್ಟಿಸಿದುದಲ್ಲದೆ ಚಾಮುಂಡಿ ಬೆಟ್ಟಕ್ಕೆ ಒಂದು ಸಾವಿರ ಮೆಟ್ಟಿಲುಗಳ ಸೋಪಾನವನ್ನು ಕಟ್ಟಿಸಿದನು. ಇವನ ಕಾಲದಲ್ಲಿ ಪ್ರಪ್ರಥಮವಾಗಿ ರಾಜ್ಯದೊಡನೆ ಯೂರೋಪಿಯನ್ನರ ಸಂಪರ್ಕವು ಸ್ಥಾಪಿತವಾಯಿತು. ಇವನ ಮರಣಾನಂತರ ಚಿಕ್ಕದೇವರಾಯನು ಅಧಿಕಾರಕ್ಕೆ ಬಂದನು.

ಚಿಕ್ಕದೇವರಾಯನು ದೇವರಾಜನ ಹಿರಿಯ ಸಹೋದರನ ಮಗನಾಗಿದ್ದನು. ದೇವರಾಜನಿಗೆ ಮಕ್ಕಳಿಲ್ಲದ ಕಾರಣ ಇವನನ್ನು ದತ್ತು ತೆಗೆದುಕೊಂಡು ಬಾಲ್ಯದಲ್ಲಿಯೇ ಉಚಿತವಾದ ಶಿಕ್ಷಣವನ್ನೊದಗಿಸಲಾಯಿತು. ಈತನ ಕಾಲಾವಧಿ ಕ್ರಿ.ಶ. 1673 ರಿಂದ 1704 ರವರೆಗೆ ಮೊಘಲ್ ಚಕ್ರವರ್ತಿ ಔರಂಗಜೇಬನ ಸಮಕಾಲೀನ. ಇವನ ಕಾಲದಲ್ಲಿ ಒಡೆಯರ್ ಸಂತತಿಯ ಇತಿಹಾಸದಲ್ಲಿ ಅನೇಕ ಪ್ರಮುಖ ಘಟನೆಗಳು ತಲೆದೂರಿದವು. ಮೊಘಲರು ದಕ್ಷಿಣ ಭಾರತದ ಚರಿತ್ರೆಯಲ್ಲಿ ಪ್ರವೇಶಿಸಿ ಬಿಜಾಪುರ ಮತ್ತು ಗೋಲ್ಕಂಡ ರಾಜ್ಯಗಳನ್ನು ನಿರ್ನಾಮ ಮಾಡಿ ಆ ಪ್ರದೇಶಗಳನ್ನು ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡರು. ಇಂತಹ ಸನ್ನಿವೇಶದಲ್ಲಿ ಅಧಿಕಾರವಹಿಸಿದ ಚಿಕ್ಕದೇವರಾಯ ಒಡೆಯರು ರಾಜ್ಯವನ್ನು ಸಂರಕ್ಷಿಸಿ ವಿಸ್ತಾರಗೊಳಿಸಿ ತನ್ನ ಮನೆತನದ ಘನತೆ ಗೌರವಗಳನ್ನು ಇಮ್ಮಡಿಗೊಳಿಸಿದನು. ಶಿವಾಜಿಯ ಆಕ್ರಮಣವನ್ನು ಹಿಮ್ಮೆಟ್ಟಿಸಿ 1675 ರಲ್ಲಿ "ಅಪ್ರತಿಮ ವೀರ" ಎಂಬ ಬಿರುದನ್ನು ಧರಿಸಿದನು.

ಕ್ರಿ.ಶ. 1687 ರಲ್ಲಿ ಚಿಕ್ಕದೇವರಾಯನು ಮೊಘಲ್ ಫೌಜುದಾರನಾದ ಖಾಸಿಂ ಖಾನನಿಂದ ಬೆಂಗಳೂರನ್ನು 3 ಲಕ್ಷ ರೂಪಾಯಿಗಳಿಗೆ ಕೊಂಡುಕೊಂಡನು. ಮೊಘಲರ ಔರಂಗಜೇಬನು ರಾಯಭಾರದಿಂದ ಸುಪ್ರೀತನಾಗಿ "ಜಗದೇವ" ಎಂಬ ಬಿರುದು ನೀಡಿ ಒಂದು ದಂತದ ಕಿರೀಟವನ್ನು ಉಡುಗೊರೆಯಾಗಿ ಕೊಟ್ಟನು. ಇದರಿಂದ ಮೈಸೂರಿನ ಅರಸನ ಘನತೆಯು ಹೆಚ್ಚಿತು. ಸುತ್ತಮುತ್ತಲಿನ ವೈರಿಗಳು ಮೈಸೂರಿನ ಮೇಲೆ ಆಕ್ರಮಣ ನಡೆಸುವ ಸಾಧ್ಯತೆಯು ಕಡಿಮೆಯಾಯಿತು. ಹದಿನೆಂಟು ಇಲಾಖೆ ಅಥವಾ ಅಠಾರ ಕಛೇರಿ" ಎಂದು ಕರೆಯಲಾಗಿರುವ ವ್ಯವಸ್ಥೆಯನ್ನು ಆಚರಣೆಗೆ ತರಲಾಯಿತು. ಕಾವೇರಿ ನದಿಗೆ ಒಡ್ಡುಗಳನ್ನು ನಿರ್ಮಿಸಿ ಹೆಚ್ಚು ಪ್ರದೇಶವನ್ನು ನೀರಾವರಿಗೆ ಅಳವಡಿಸಲಾಯಿತು.

ಇಂದಿಗೂ ಪ್ರಸಿದ್ಧವಾಗಿರುವ ಚಿಕ್ಕದೇವರಾಜನಾಲೆ ಮತ್ತು ದೇವರಾಜ ನಾಲೆಗಳು ಚಿಕ್ಕದೇವರಾಯನ ಕಾಲದಲ್ಲಿ ನಿರ್ಮಾಣವಾದವು. ಇವನ ಕಾಲದಲ್ಲಿ ಖಜಾನೆಯಲ್ಲಿ ಒಂಭುತ್ತು ಕೋಟಿ ಪಗೋಡಗಳನ್ನು ಅಪಾರ ಧನ ಸಂಗ್ರಹವಾಗಿದ್ದು ರಾಜನು "ನವಕೋಟಿ ನಾರಾಯಣ" ಎಂಬ ಪ್ರಶಂಸೆಗೆ ಪಾತ್ರನಾಗಿದ್ದನು. ಇವನ ಮರಣಾ ನಂತರ ಅಧಿಕಾರಕ್ಕೆ ಬಂದ ಅರಸರು ದುರ್ಬಲರಾಗಿದ್ದರು. ಉತ್ತರಾಧಿಕಾರಿಯಾದ ಎರಡನೇ ಕಂಠೀರವ ನರಸ ರಾಜನು ಕ್ರಿ.ಶ. 1704 ರಿಂದ 1714 ರ ವರೆಗೆ ಹೆಸರಿಗೆ ಮಾತ್ರ ರಾಜನಾಗಿದ್ದನು. ಈ ಕಾಲದಲ್ಲಿ ದಳವಾಯಿಗಳು ಪ್ರಬಲರಾದರು. ಮೈಸೂರು ರಾಜ್ಯ ಪ್ರಬಲ ಅರಸರಿಲ್ಲದೆ ಹರಿದು ಹಂಚಿ ಹೋಯಿತು. 1746 ರಲ್ಲಿ ಮೈಸೂರು ಸೈನ್ಯವು ಒಬ್ಬ ಪಾಳೆಯಗಾರನ ವಶದಲ್ಲಿದ್ದು ದೇವನಹಳ್ಳಿಗೆ ಮುತ್ತಿಗೆ ಹಾಕಿತು. ಒಂಭತ್ತು ತಿಂಗಳುಗಳ ಕಾಲ ಮುತ್ತಿಗೆ

ಮುಂದುವರಿಯಿತು. ಹೈದರ್ ಆಲಿ ಎಂಬ ತರುಣ ಸಿಪಾಯಿಯ ಚಾಕಚಕ್ಯತೆಯಿಂದ ದೇವನಹಳ್ಳಿ ಮೈಸೂರಿನ ವಶವಾಯಿತು. ಮುಂದಿನ ದಿನದಲ್ಲಿ ಮೈಸೂರು ಹೈದರನ ವಶದಲ್ಲಿ ಆಳ್ವಿಕೆ ಮುಂದುವರಿಯಿತು.

**ಉಪ ಸಂಹಾರ**

ಹೀಗೆ ಕ್ರಿ.ಶ. 15ನೇ ಶತಮಾನದ ಪ್ರಾರಂಭದಲ್ಲಿ ಮೈಸೂರಿನ ಒಡೆಯರ ಸಂತತಿಯ ಪೂರ್ವಿಕರ ವಿಜಯನಗರ ಸಾಮ್ರಾಜ್ಯದ ಅಧೀನದಲ್ಲಿದ್ದ ಮೈಸೂರು ಜಿಲ್ಲೆ ಒಂದು ಚಿಕ್ಕ ಪಾಳೇಪಟ್ಟವನ್ನು ಸ್ಥಾಪಿಸಿ, ಸ್ವತಂತ್ರ ಮನೆತನವಾಗಿ ಬೆಳೆಯಿತು. ಈ ವಂಶದ ಆರಂಭದ ಒಡೆಯರುಗಳಲ್ಲಿ ರಾಜ ಒಡೆಯರ್, ಚಿಕ್ಕದೇವರಾಜ ಒಡೆಯತ್, ಕಂಠೀರವ ನರಸರಾಜ ಒಡೆಯರ್ ಜೊತೆಗೆ ಅನೇಕ ಅರಸರು ಮೈಸೂರು ರಾಜಮನೆತನಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ.

**ಪರಾಮರ್ಶನ ಗ್ರಂಥಗಳು**


- ಅನಿತ. ಎಂ.ಎಸ್ – ನಾಲ್ವಡಿ ಕೃಷ್ಣರಾಜ ಒಡೆಯರ್
- ದಿವಾಕರ್. ಆರ್.ಆರ್– *ಕರ್ನಾಟಕದ ಪರಂಪರೆ*
- ಮುದ್ದಾಚಾರಿ, ಬಿ – *ಕರ್ನಾಟಕದ ಇತಿಹಾಸ*
- ಮೈಸೂರು ವಿಶ್ವವಿದ್ಯಾನಿಲಯ – *ಕನ್ನಡ ವಿಶ್ವಕೋಶ* . ಮೈಸೂರು,
- ಫಾಲಾಕ್ಷ–ಆಧುನಿಕ ಕರ್ನಾಟಕದ ಅವಲೋಕನ
- ರಂಗಸ್ವಾಮಯ್ಯ. ಜಿ.ಆರ್– ಕರ್ನಾಟಕದ ಸಂಕ್ಷಿಪ್ತ ಚರಿತ್ರೆ.
- ಶಿವರುದ್ರಸ್ವಾಮಿ, ಎಸ್.ಎನ್–ಕರ್ನಾಟಕದ ಪ್ರೌಢ ಇತಿಹಾಸ ಸಂಸ್ಕೃತಿ
- ಸೂರ್ಯನಾಥ ಕಾಮತ್– *ಕರ್ನಾಟಕದ ಸಂಕ್ಷಿಪ್ತ ಇತಿಹಾಸ*
- ಷೇಕ್ ಅಲಿ,ಬಿ – ಕರ್ನಾಟಕದ ಚರಿತ್ರೆ
- ವೀರತಪ್ಪ, ಕೆ – ಕರ್ನಾಟಕದ ಸಂಕ್ಷಿಪ್ತ ಚರಿತ್ರೆ